**ಪತ್ರಿಕಾ ಪ್ರಕಟಣೆ**

# ಮೊದಲ ಬಾರಿಗೆ ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ನಿಂದ ಫ್ಯಾಷನ್ ರೀಟೇಲರ್‌ಗಳಿಗೆ 'ಹಬ್ಬದ ಉತ್ಸವ'

- **ಸೆಪ್ಟೆಂಬರ್ 29 ರಿಂದ ಅಕ್ಟೋಬರ್ 31, 2020 ರವರೆಗೆ ನಡೆಯಲಿರುವ 'ಬಿಗ್ ಫ್ಯಾಷನ್ ಫೆಸ್ಟಿವಲ್ ಮಂತ್'**
- **ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಮಾರ್ಕೆಟ್‌ಪ್ಲೇಸ್‌ನಲ್ಲಿ ಶೇ.95 ರಷ್ಟು ಸ್ಥಳೀಯ ಉತ್ಪನ್ನಗಳಿಗೆ ಆದ್ಯತೆ**
- **ಈ ಮೂಲಕ ಬಿ2ಬಿ ಮಾರ್ಕೆಟ್‌ಪ್ಲೇಸ್ ಮೂಲಕ ಸ್ಥಳೀಯ ಎಂಎಸ್‌ಎಂಇಗಳ ಪ್ರಗತಿಗೆ ನೆರವು**
- **ಹಬ್ಬದ ಈ ಸಂದರ್ಭದಲ್ಲಿ 15 ನಗರಗಳಿಗೆ ವಿತರಣಾ ಜಾಲ ವಿಸ್ತರಣೆ**

ಬೆಂಗಳೂರು, ಸೆಪ್ಟೆಂಬರ್ 28, 2020: ಭಾರತದ ದೇಶೀಯ ಸಂಸ್ಥೆಯಾಗಿರುವ ಫ್ಲಿಪ್‌ಕಾರ್ಟ್ ಗ್ರೂಪ್‌ನ ಡಿಜಿಟಲ್ ಬಿ2ಬಿ ಮಾರ್ಕೆಟ್‌ಪ್ಲೇಸ್ ಆಗಿರುವ ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಇಂದು 'ಬಿಗ್ ಫೆಸ್ಟಿವಲ್ ತಿಂಗಳು' (ದೊಡ್ಡ ಹಬ್ಬದ ಮಾಸ) ಅನ್ನು ಘೋಷಿಸಿದೆ. ಇದು ಈ ವರ್ಷದ ಆಗಸ್ಟ್‌ನಲ್ಲಿ ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಆರಂಭವಾದ ನಂತರ ನಡೆಯುತ್ತಿರುವ ಮೊದಲ ಅತಿ ದೊಡ್ಡ ಹಬ್ಬದ ಋತುವಿನ ಕಾರ್ಯಕ್ರಮವಾಗಿದೆ. ಈ ಮಾರಾಟ ಉತ್ಸವವು ಸೆಪ್ಟೆಂಬರ್ 29, 2020 ರಿಂದ ಆರಂಭವಾಗಿ ಅಕ್ಟೋಬರ್ 31, 2020 ರವರೆಗೆ ನಡೆಯಲಿದೆ. ಇದರಲ್ಲಿ 100 ಕ್ಕೂ ಹೆಚ್ಚು ಮಾರಾಟಗಾರರು 50 ಕ್ಕೂ ಅಧಿಕ ಬ್ರ್ಯಾಂಡ್‌ಗಳನ್ನು ಪ್ರದರ್ಶನ ಮತ್ತು ಮಾರಾಟ ಮಾಡಲಿದ್ದಾರೆ ಹಾಗೂ 1 ಲಕ್ಷಕ್ಕೂ ಅಧಿಕ ಸಂಖ್ಯೆಯ ಸದಸ್ಯರು ಇರಲಿದ್ದಾರೆ.

ತನ್ನ ಆರಂಭದ ನಂತರ ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ದೇಶಾದ್ಯಂತ 15 ನಗರಗಳು ಮತ್ತು 750 ಕ್ಕೂ ಹೆಚ್ಚು ಪಿನ್‌ಕೋಡ್‌ಗಳಿಗೆ ತನ್ನ ಕಾರ್ಯಾಚರಣೆಯನ್ನು ವಿಸ್ತರಣೆ ಮಾಡಿದೆ. ಫ್ಲಿಪ್‌ಕಾರ್ಟ್‌ನ ಸದೃಢವಾದ ದೇಶೀಯ ತಂತ್ರಜ್ಞಾನ ಸಾಮರ್ಥ್ಯಗಳ ಬೆಂಬಲದೊಂದಿಗೆ, ಗ್ರಾಹಕ ಇ-ಕಾಮರ್ಸ್ ವಿಭಾಗದಲ್ಲಿ ನಾಯಕತ್ವ ಸ್ಥಾನವನ್ನು ಹೊಂದಿದೆ ಮತ್ತು ಭಾರತದ ಉದ್ಯಮವನ್ನು ವಿನೂತನವಾಗಿ ಅರ್ಥೈಸಿಕೊಂಡಿರುವ ಸಂಸ್ಥೆಯಾಗಿದೆ. ಈ ಮೂಲಕ ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಭಾರತದ ರೀಟೇಲ್ ಪರಿಸರ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿರುವ ಕಿರಾಣಗಳು ಮತ್ತು ಎಂಎಸ್‌ಎಂಇಗಳ ವ್ಯವಹಾರಗಳನ್ನು ಸುಲಭವಾಗುವಂತೆ ಮಾಡುತ್ತಿದೆ.

ಫ್ಲಿಪ್‌ಕಾರ್ಟ್ ಹೋಲ್‌ಸೇಲ್ & ವಾಲ್‌ಮಾರ್ಟ್ ಇಂಡಿಯಾದ ಹಿರಿಯ ಉಪಾಧ್ಯಕ್ಷ ಮತ್ತು ಮುಖ್ಯಸ್ಥ ಆದರ್ಶ್ ಮೆನನ್ ಅವರು ಮಾತನಾಡಿ, "ಮುಂಬರುವ ಹಬ್ಬದ ಸೀಸನ್ ಚಿಲ್ಲರೆ ವ್ಯಾಪಾರಿಗಳು ಮತ್ತು ಎಂಎಸ್‌ಎಂಇಗಳು ತಮ್ಮ ಮಾರಾಟ ಮತ್ತು ಲಾಭವನ್ನು ಹೆಚ್ಚಿಸಿಕೊಳ್ಳಲು ಅತ್ಯದ್ಭುತವಾದ ಅವಕಾಶವಾಗಿದೆ.

ನಮ್ಮ ಪಾಲುದಾರರು ಈ ಹಬ್ಬದ ಸಂದರ್ಭದಲ್ಲಿ ಅವರ ವ್ಯವಹಾರವನ್ನು ಸುಲಭ ಮತ್ತು ಸಮರ್ಪಕವಾದ ಒಳನೋಟಗಳು ಮತ್ತು ದಾಸ್ತಾನು ಆಯ್ಕೆಗಳ ಮೂಲಕ ಗ್ರಾಹಕರ ಬೇಡಿಕೆಗಳನ್ನು ಸಮರ್ಥವಾಗಿ ಪೂರೈಸಲು ನೆರವಾಗುವ ಮೂಲಕ ನಾವು ಅವರು ಸಂತಸದಿಂದ ಹಬ್ಬದ ಸೀಸನ್ ಅನ್ನು ಆಚರಿಸಲು ನೆರವಾಗುತ್ತಿದ್ದೇವೆ. ಇಡೀ ಚಿಲ್ಲರೆ ಪರಿಸರ ವ್ಯವಸ್ಥೆಯು ಒಟ್ಟಾಗಿ ಬರಲು ಇದೊಂದು ಉತ್ತಮ ಅವಕಾಶವಾಗುವುದನ್ನು ನಾವು ಕಾಣಲಿದ್ದೇವೆ. ಅಲ್ಲದೇ, ಗ್ರಾಹಕರ ಭಾವನೆ ಮತ್ತು ದೇಶಾದ್ಯಂತ ಇರುವ ಸ್ಥಳೀಯ ಎಂಎಸ್‌ಎಂಇಗಳ ವ್ಯವಹಾರ ಬೆಳವಣಿಗೆಯನ್ನು ನಾವು ಕಾಣಲಿದ್ದೇವೆ" ಎಂದು ತಿಳಿಸಿದರು.

ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ನ 'ಬಿಗ್ ಫೆಸ್ಟಿವಲ್ ತಿಂಗಳು' ಪುರುಷರು, ಮಹಿಳೆಯರ ಪಾಶ್ಚಿಮಾತ್ಯ, ಎಥ್ನಿಕ್ ಉಡುಗೆಗಳು, ಮಕ್ಕಳ ಉಡುಗೆಗಳು ಮತ್ತು ಪಾದರಕ್ಷೆಗಳಂತಹ ಅದ್ಭುತ ಕೊಡುಗೆಗಳಲ್ಲಿ ವ್ಯಾಪಕವಾದ ಶ್ರೇಣಿಯ ಉತ್ಪನ್ನಗಳನ್ನು ನೀಡುವ ಮೂಲಕ ಭಾರತೀಯ ಹಬ್ಬಗಳ ಉತ್ಸಾಹವನ್ನು ಆಚರಣೆ ಮಾಡಲು ಪೂರಕವಾಗಿ ವಿನ್ಯಾಸಗೊಳಿಸಲಾಗಿದೆ. ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ತನ್ನ ದಕ್ಷತೆಯ ತಂತ್ರಜ್ಞಾನ ಮತ್ತು ಲಾಜಿಸ್ಟಿಕ್‌ನೊಂದಿಗೆ ಬೃಹತ್ ಪ್ರಮಾಣದ ಉತ್ಪನ್ನಗಳನ್ನು ಖರೀದಿಸುವ ಪ್ರಕ್ರಿಯೆಯನ್ನು ತಡೆರಹಿತವಾಗಿ ಮಾಡಲಾಗಿದೆ. ಅತ್ಯುತ್ತಮ ಮಾರ್ಜಿನ್‌ಗಳು, ಸುಲಭವಾದ ಸಾಲ ವ್ಯವಸ್ಥೆ, ತ್ವರಿತವಾಗಿ ಮನೆ ಬಾಗಿಲಿಗೆ ವಿತರಣೆ, ಅತ್ಯುತ್ತಮ ಗುಣಮಟ್ಟ, ಸ್ಮಾರ್ಟ್ ಆಯ್ಕೆ ಹಾಗೂ ಸುಲಭವಾಗಿ ರಿಟರ್ನ್ಸ್ ವ್ಯವಸ್ಥೆಗಳನ್ನು ನೀಡುತ್ತದೆ.

ಇದಲ್ಲದೇ, ಸದೃಢವಾಗಿರುವ ತಂತ್ರಜ್ಞಾನ ವ್ಯವಸ್ಥೆಯಿಂದಾಗಿ ಪ್ಲಾಟ್‌ಫಾರ್ಮ್‌ನಲ್ಲಿ ತಡೆರಹಿತವಾಗಿ ಆರ್ಡರ್ ಪ್ಲೇಸ್‌ಮೆಂಟ್ ಮತ್ತು ರೀಟೇಲರ್‌ಗಳಿಗೆ ಪ್ರಕ್ರಿಯೆಯನ್ನು ಸುಗಮ ಮತ್ತು ಸುಲಭವಾಗಿ ನಡೆಸಲು ಅನುವು ಮಾಡಿಕೊಡುತ್ತದೆ.

ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಆ್ಯಪ್ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಲಭ್ಯವಿದೆ. ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ದಯಮಾಡಿ https://flipkartwholesale.com/ ಇಲ್ಲಿಗೆ ಭೇಟಿ ನೀಡಿ.

**About the Flipkart Group**

The Flipkart Group is one of India's leading digital commerce entities and includes group companies Flipkart, Myntra, and PhonePe. Started in 2007, Flipkart has enabled millions of consumers, sellers, merchants and small businesses to be a part of India's e-commerce revolution, with a registered customer base of over 250 million, offering over 150 million products across 80+ categories. Our efforts to democratize e-commerce in India, drive access and affordability, delight customers, create lakhs of jobs in the ecosystem and empower generations of entrepreneurs and MSMEs has inspired us to innovate on many industry firsts. The recent launch of Flipkart Wholesale, our new digital marketplace, is a testament to our commitment to accelerate the growth of kiranas and MSMEs in India. Flipkart is known for pioneering services such as Cash on Delivery, No Cost EMI and easy returns – customer-centric innovations that have made online shopping more accessible and affordable for millions of Indians. Together with Myntra, which holds a prominent position in the online fashion market, PhonePe, India's fastest growing digital payments platform, and now Flipkart Wholesale, the Flipkart Group will continue to steer the transformation of commerce in India through technology.

**For more information, please write to**
**media@flipkart.com**